'ನಮ್ಮ ದೊರೆ ಭೀಮರಾಜ ಆತನ ಸತಿಸುತರು, ಬಂಧು ಬಾಂಧವರು, ನಿಮ್ಮ ಕುಮಾರರು ಕ್ಷೇಮದಿಂದಿದ್ದಾರೆ. ನಳಮಹಾರಾಜನು ರಾಜ್ಯ ತೊರೆದು ನಿಮ್ಮೊಂದಿಗೆ ಕಾಡಿಗೆ ಹೋದುದನ್ನು ಕೇಳಿ– ನಿಮ್ಮವರೆಲ್ಲ ಶೋಕಸಾಗರದಲ್ಲಿ ಮುಳುಗಿದ್ದಾರೆ. ದುಃಖವನ್ನು ತಡೆಯಲಾಗದೆ ರಾಜ ದಂಪತಿಗಳು ನಿನ್ನನ್ನು ಹುಡುಕಿ ಬರಲು ಕಳುಹಿಸಿದ್ದಾರೆ. ನಾನು ಈ ಭೂಮಿಯಲ್ಲೆಲ್ಲ ಅರಸುತ್ತ ಇಲ್ಲಿಗೆ ಬಂದು ನಿಮ್ಮನ್ನು ಕಂಡೆನು. ನನ್ನ ಪುಣ್ಯ ಕೈಗೂಡಿತು.'

ಆ ಮಾತುಗಳನ್ನು ಕೇಳುತ್ತ ದಮಯಂತಿ ದುಃಖದ ಕಣ್ಣೀರಿನಲ್ಲಿ ತೋಯ್ದು ಹೋದಳು. ಆ ವಿಪ್ರೋತ್ತಮನನ್ನು ಗೌರವದಿಂದ ಕಂಡು ತನ್ನವರ ಬಗ್ಗೆ ಮತ್ತೆ ಮತ್ತೆ ವಿಚಾರಿಸಿದಳು. ಚೇದಿಯ ರಾಣಿಗೆ ಸುದೇವನು ಬಂದಿರುವ ವಿಷಯ ತಿಳಿಸಿದಳು. ಆ ರಾಣಿಯು ಅವನನ್ನು ಹೀಗೆ ಕೇಳಿದಳು:

'ಎಲೆ ವಿಪ್ರೋತ್ತಮ ನೀನು ಯಾರು? ಬಂದ ಸಂಗತಿ ಏನು?'

'ತಾಯಿಯೇ ಕೇಳು. ವಿದರ್ಭರಾಜನು ಮಗಳು ದಮಯಂತಿಯು ರಾಜ್ಯ ತೊರೆದು ಪತಿಯೊಡನೆ ಕಾಡಿಗೆ ಹೋದ ವಿಷಯ ಕೇಳಿ ತುಂಬಾ ದುಃಖಿತನಾದನು. ಮಗಳನ್ನು ಹುಡುಕಿ ಕರೆತರಲು ಆಜ್ಞಾಪಿಸಿದನು. ಹುಡುಕುತ್ತ ಇಲ್ಲಿಗೆ ಬಂದು ಸತಿ ಶಿರೋಮಣಿ ದಮಯಂತಿಯನ್ನು ಕಂಡೆ' ಎಂದು ಸುದೇವನು ಕೈಮುಗಿದು ವಿನಂತಿಸಿದನು.

ಅದನ್ನು ಕೇಳ ಕೇಳುತ್ತಲೇ ಶೋಕಭರಿತಳಾದ ಆ ರಾಣಿ 'ಶಿವ ಶಿವಾ!' ಎಂದು ಹೇಳುತ್ತ ದಮಯಂತಿಯನ್ನು ತೆಗೆದು ಅಪ್ಪಿಕೊಂಡಳು. 'ಮಗಳೇ, ನಿನಗೆ ರಾಜ್ಯ ಸಂಪದವು ಜಿಗುಪ್ಸೆಯಾಯಿತೇ? ಈ ಮಹಾ ವ್ಯಥೆಯನ್ನು ನಿನ್ನ ಹಣೆಯಲ್ಲಿ ವಿಧಿ ಬರೆದನೇ? ನಳಮಹಾರಾಜ ಎಲ್ಲಿಗೆ ಹೋದನೋ? ಕಾಲಗತಿ ಹೀಗಾಯಿತಲ್ಲ' ಎಂದು ಮರುಗುತ್ತ ಮಾತು ಮುಂದುವರೆಸಿ 'ಮಗಳೇ, ಶೋಕವನ್ನು ಬಿಡು. ನಾನು ನಿನ್ನ ತಾಯಿಯ ತಂಗಿ. ಈವರೆಗೆ ನನ್ನ ಅರಮನೆಯಲ್ಲಿ ತುಂಬಾ ತುಂಬಾ ನೊಂದಿರುವೆ. ನೀನು ಸುನಂದೆಗೆ ಸರಿ ಜೋಡಿಯಾದವಳು. ನೀನೂ ನನ್ನ ಮಗಳೇ' ಎಂದು ಹೇಳಿ ಪ್ರೀತಿಯಿಂದ ಮುದ್ದಿಟ್ಟು ವಾತ್ಸಲ್ಯವನ್ನು ತೋರಿದಳು.

ಚಿಕ್ಕಪ್ಪನಾದ ದೊರೆ ಸುಬಾಹು ತುಂಬಾ ಮರುಗಿ,

'ಮಗಳೇ ದಮಯಂತಿ, ನೀನು ಪತಿಯಿಲ್ಲದೆ ಚಿಂತೆಯಿಂದ ಎಲ್ಲವನ್ನೂ ತೊರೆದು ಕರಗಿ ಕುಂದಿದೆ. ನನಗೆ ನೀನು ಯಾರೆಂದು ಗೊತ್ತಿರಲಿಲ್ಲ. ನಾನು ನಿನ್ನ ಪತಿಯನ್ನು ಹುಡುಕಿ ಕರೆಸಿ ಕೊಡುವೆ. ನೀನು ಚಿಂತಿಸಬೇಡ' ಎಂದು ಹೇಳಿ, ಅವಳ ಕಣ್ಣೀರನ್ನು ತನ್ನ ವಸ್ತ್ರದ ಸೆರಗಿನಿಂದ ಒರೆಸಿ ಸಂತೈಸಿದನು. ಅನಂತರ ಓಲಗಕ್ಕೆ ಬಂದು ಬ್ರಾಹ್ಮಣ ಸುದೇವನನ್ನು ಕರೆಸಿದನು. ಅವನಿಗೆ ರತ್ನ, ವಸ್ತ್ರಾದಿಗಳನ್ನು ಕಾಣಿಕೆ ನೀಡಿ ಉಪಚರಿಸಿ ಕಳುಹಿಸಿದನು. ಸುದೇವನು ತಡಮಾಡದೆ ಭೀಮನೃಪಾಲನ ಓಲಗಕ್ಕೆ ಬಂದನು.

### ಗಂಡನಗಲಿದ ಚಿಂತೆಯಲಿ ಮುಖ ಬಾಡಿ ದೇಹವನು ದಂಡಿಸಿದಳನ್ನ ದಲಿ

ಅರಸ ಧರ್ಮರಾಜನೇ ಕೇಳು. ವಿದರ್ಭರಾಜನು ಮನಸ್ಸಿನಲ್ಲಿ ಮರುಗುತ್ತಿರುವ ಸಮಯದಲ್ಲಿ ವಿಪ್ರೋತ್ತಮನಾದ ಸುದೇವನು ಬಂದು ಕೈ ಮುಗಿದು ಈ ರೀತಿ ಹೇಳಿದನು:

'ಪ್ರಭುವೇ, ನಾನು ದಮಯಂತಿಯನ್ನು ಚೈದ್ಯಪುರದಲ್ಲಿ ಕಂಡೆನು. ಅವಳು ಚಿಕ್ಕಮ್ಮನೊಂದಿಗೆ ಸಂತೋಷದಿಂದಿದ್ದಾಳೆ' ಎಂದು ನುಡಿಯುತ್ತ ಮತ್ತೆ ಮಾತು ಮುಂದುವರೆಸಿದನು. 'ನಾನು ತಮ್ಮ ಮಗಳನ್ನು ಕಂಡು ಮಾತಾಡಿದೆ. ಅವಳ ತಲೆಗೂದಲು ಅಸ್ತವ್ಯಸ್ತವಾಗಿದ್ದು, ಮಲಿನವಸನವನ್ನು ಉಟ್ಟಿದ್ದಾಳೆ. ಗಂಡನನ್ನು ಅಗಲಿದ ಚಿಂತೆಯಲ್ಲಿ ಅನ್ನವನ್ನು ಸೇವಿಸದೆ ದೇಹ ದಂಡಿಸಿರುವುದರಿಂದ ಮುಖ ಬಾಡಿದೆ. ಮನಸ್ಸು ಕುಗ್ಗಿ ಮುದುಡಿಕೊಂಡಿದೆ. ತನ್ನ ಗಂಡನನ್ನು ಹುಡುಕಿ ತಿಳಿಸುವರಾರು ಎಂದು ಮನದಲ್ಲಿಯೇ ದುಃಖಿಸುತ್ತಿದ್ದಾಳೆ.'

ಮಗಳ ಸುದ್ದಿಯನ್ನು ಕೇಳಿ ಭೀಮರಾಜನ ಮುಖ ಅರಳಿತು. ಅವನ ಮನಸ್ಸು ಉಲ್ಲಾಸದಿಂದ ರೋಮಾಂಚನಗೊಂಡಿತು. ತಕ್ಷಣ ಸ್ತ್ರೀಯರನ್ನು, ಆಪ್ತ ಸಚಿವರನ್ನು ಕರೆದು ಅವರಿಗೆ ಮಗಳನ್ನು ಕರೆತರಲು ಹೇಳಿದನು. ಅವರಿಗೆ ರತ್ನಾಭರಣಗಳನ್ನು ಉಡುಗೊರೆಯಾಗಿ ನೀಡಿ ಕಳುಹಿಸಿದನು.

ಅವರು ಚೈದ್ಯನಗರಕ್ಕೆ ಬಂದು ಸುಬಾಹು ದೊರೆಯನ್ನು ಕಂಡರು. ಆ ದೊರೆಯು ಭೀಮನೃಪಾಲನ ಕಡೆಯವರ ಕುಶಲವನ್ನು ಕೇಳಿ ತಿಳಿದನು. ಬಂದವರು,

'ಮಹಾರಾಜನೇ, ನಮ್ಮ ಭೀಮನೃಪಾಲನು ದಮಯಂತಿಯನ್ನು ಕಳುಹಿಸಬೇಕೆಂದು ತಿಳಿಸಿರುವನು. ಹರುಷದಿಂದ ತಮಗೆ ಉಡುಗೊರೆಗಳನ್ನು ಕಳುಹಿಸಿರುವನು, ಸ್ವೀಕರಿಸಿ' ಎಂದು ಹೇಳಿ ನೀಡಿದರು.

ಮಹಾರಾಜ ಸುಬಾಹು ತಕ್ಷಣ ಮಂತ್ರಿಗಳನ್ನು ಕರೆಸಿ ಭೀಮನ ಪುರಕ್ಕೆ ಪ್ರಯಾಣದ ವ್ಯವಸ್ಥೆ ಮಾಡಿದನು. ದಮಯಂತಿಯನ್ನು ಕರೆದು,

'ಮಗಳೇ, ನೀನು ನಮ್ಮಲ್ಲಿ ತಿಂಗಳು ಕಾಲ ಕಷ್ಟದಿಂದ ಜೀವನ ಕಳೆದೆ. ಕಠಿಣ ದಿನ ಕಳೆಯಿತು. ನಿನಗೆಲ್ಲ ಶುಭವಾಗುತ್ತದೆ' ಎಂದು ಹೇಳಿ ಅತಿ ಪ್ರೇಮ ವಾತ್ಸಲ್ಯಗಳೊಂದಿಗೆ ಅಮೂಲ್ಯ ಆಭರಣಗಳನ್ನು ಕೊಟ್ಟನು.

ಪಲ್ಲಕ್ಕಿಗಳನ್ನು ತರಿಸಿ ತರುಣಿಯರ ಸಮೂಹದಲ್ಲಿ ದಮಯಂತಿಯನ್ನು ಕುಳ್ಳಿರಿಸಿದನು. ತಾನು ಆನೆಯ ಮೇಲೆ ಕುಳಿತು ಹೊರಟನು. ಹಲವಾರು ವಾದ್ಯ ಘೋಷಗಳೊಂದಿಗೆ ಆನೆ, ಕುದುರೆ, ಕಾಲಾಳುಗಳ ಸಮೂಹದೊಡನೆ ವಿದರ್ಭ ನಗರವನ್ನು ಪ್ರವೇಶಿಸಿದನು.

ಅರಸನ ಮಗಳು ದಮಯಂತಿ ಬಂದ ವಾರ್ತೆಯನ್ನು ದೂತರು ಪ್ರೀತಿಯಿಂದ ಜನರಿಗೆ ತಿಳಿಸಲು, ಅವರು ಆನಂದದಿಂದ ಕುಣಿದಾಡಿದರು. ದೂತರು ಬಂದು ಭೀಮರಾಜನಿಗೆ ಕೈ ಮುಗಿದು 'ದಮಯಂತಿ ಬಂದಳು' ಎಂದು ತಿಳಿಸಿದರು. ಅದನ್ನು ಕೇಳಿ ಹರ್ಷಗೊಂಡ ರಾಜನು ತನ್ನ ಚತುರಂಗ ಬಲದೊಡನೆ ಹೊರಟನು. ಮಗಳನ್ನು ಮತ್ತು ಬಂಧು ಸುಬಾಹುವನ್ನು ಪ್ರೀತಿಯಿಂದ ಸ್ವಾಗತಿಸಿ ಅರಮನೆಗೆ ಕರೆದುಕೊಂಡು ಬಂದನು.

### ನೀರೊಗುವ ಕಣ್ಣೀರಿನಲಿ ಸಂತೈಸಿದಳು ನಿಜಸುತರ

ಧರ್ಮರಾಜನೇ ಕೇಳು. ಆ ನಗರದಲ್ಲಿ ನಡೆದ ಸಂಭ್ರಮ, ಆನಂದ, ಉತ್ಸವಗಳನ್ನು ಏನೆಂದು ವರ್ಣಿಸಲಿ? ಅಂದು ಅರಮನೆಯಲ್ಲಿ ಆತುರದಿಂದ ಓಡಿ ಬಂದ ತಾಯಿಯು ಮಗಳು ದಮಯಂತಿಯನ್ನು ಬಿಗಿದಪ್ಪಿಕೊಂಡು ಸಂತೋಷಪಟ್ಟಳು. ಬಂಧು ಬಳಗದವರು ಹಾಗೂ ಅಂತಃಪುರದ ಯುವತಿಯರು ತಮ್ಮ ರಾಜಪುತ್ರಿಯನ್ನು ಕಂಡು ಉಲ್ಲಾಸಗೊಂಡರು. ಅವಳ ಮಕ್ಕಳು ಓಡಿ ಬಂದು ಅಪ್ಪಿಕೊಂಡರು.

ಮಗ ಇಂದ್ರಸೇನನನ್ನು ಬಾಚಿ ತಬ್ಬಿಕೊಂಡ ದಮಯಂತಿಯು ಮಗಳು ಚಂದ್ರಾಸ್ಯಳನ್ನು ತೊಡೆಯೊಳಗಿಟ್ಟುಕೊಂಡು ತಲೆಮೂಸಿ ಮುದ್ದಾಡಿದಳು. ಆ ಮಕ್ಕಳ ಮೂಕವನ್ನು ನೋಡುತ್ತ ಮೊಲೆಯ ಹಾಲು ಜಿನುಗುವ ಆ ಜನನಿ, ಅದಕ್ಕೂ ಮಿಗಿಲಾಗಿ ಹರಿವ ಕಂಬನಿ ನೀರಿನಲ್ಲಿ ಅವರನ್ನು ಸಂತೈಸಿದಳು.

ಶ್ರೀಹರಿಯ ಕೃಪೆಯಿಂದ ಭೀಮನೃಪಾಲನು ಬಂಧು ಸುಬಾಹು ಮತ್ತಿತರರನ್ನು ಗೌರವದಿಂದ ಕಂಡು ಉಚಿತ ರೀತಿಯಲ್ಲಿ ಸತ್ಕರಿಸಿ, ಉಪಚರಿಸಿ ಬೀಳ್ಕೊಟ್ಟನು. ದಮಯಂತಿಯು ಪತಿಯನ್ನು ಅಗಲಿದ ಚಿಂತೆಯಲ್ಲಿ ಮನಗುಂದಿದಳು. ಒಳಿತಿಗಾಗಿ ಚೆನ್ನಿಗರಾಯ ಶ್ರೀ ವಿಷ್ಣುವನ್ನು ನೆನೆಯುತ್ತಿದ್ದಳು.

### ದಮಯಂತಿಯ ಮರು ಸ್ವಯಂವರಕ್ಕೆ ಸಾರಥಿಯಾದ ನಳನೃಪ

ರಾಜೇಂದ್ರ ಧರ್ಮನೃಪಾಲನೇ ಕೇಳು. ದಮಯಂತಿಯು ತವರಿನಲ್ಲಿ ಸಕಲ ರಾಜ ವೈಭವವನ್ನು ತೊರೆದಳು. ತಲೆ ಬಾಚಿಕೊಳ್ಳದೆ ಧೂಳು ಮುಸುಕಿ, ಮಲಿನ ವಸನಗಳಲ್ಲಿದ್ದು ಸದಾ ತನ್ನ ಪತಿಯ ವ್ಯಥೆಯಲ್ಲಿದ್ದಳು. ಅದನ್ನು ನೋಡಿದ ಅವಳ ತಾಯಿ 'ನಳನು ರಾಜ್ಯವನ್ನು ಕಳೆದುಕೊಂಡು ಕಾಡಿನಲ್ಲಿ ನಿನ್ನನ್ನು ಹೇಗೆ ಅಗಲಿದ ಹೇಳು' ಎಂದು ಕೇಳಿದಳು. ಆಗ ದಮಯಂತಿಯ ಪುಷ್ಕರನು ಕಪಟದಲ್ಲಿ ರಾಜ್ಯವನ್ನು ಅಪಹರಿಸಿದ್ದು, ಕಾಡಿನಲ್ಲಿ ನಳ ವಸ್ತ್ರಹೀನನಾಗಿ ತನ್ನ ಸೀರೆಯ ಅರ್ಧಭಾಗ ಉಟ್ಟಿದ್ದು; ತಾನು ನಿದ್ದೆ ಮಾಡುವಾಗ ತೊರೆದು ಹೋಗಿದ್ದು; ತಾನು ಚೈದ್ಯನಗರಿ ತಲುಪಿ ಅಲ್ಲಿ ಸೈರಂಧ್ರಿಯಾಗಿದ್ದುದನ್ನು ವಿವರಿಸಿ ಹೇಳಿದಳು. ಅಮ್ಮನನ್ನು ತಬ್ಬಿಕೊಂಡು,

### ದಾನವಾಮರರೊಳಗೆ ಕಾಣೆ ಸಮಾನರನು ನಳನೃಪಗೆ

'ಎಲೆ ತಾಯಿ, ನನ್ನ ಪುಣ್ಯದ ಹಾನಿಯನ್ನು ಏನೆಂದು ಹೇಳಲಿ? ನನ್ನ ಹಾಗೆ ತೊಳಲಿ ಬಳಲಿದವರು ಯಾರಿದ್ದಾರೆ ಈ ಲೋಕದಲ್ಲಿ? ನಳನೃಪನಿಗೆ ಸಮಾನರಾದವರನ್ನು ದಾನವರಲ್ಲಿ, ದೇವತೆಗಳಲ್ಲಿ ನಾನು ಕಾಣೆ. ಈಗ ಅವನನ್ನು ಪಡೆಯಲು ಏನು ಮಾಡುವುದು' ಎಂದು ಕಣ್ಣೀರುಗರೆದು ಮತ್ತೆ ನುಡಿದಳು.